ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಬಂದಿದೆ.

ಆ) ಕೆ.ಎಂ.ಸಿ. ಕಾಯ್ದೆ 1976ರನ್ವಯ ಅರ್ಹ ಅನಧಿಕೃತ ಮನೆಗಳ ಅನುಭವದಾರರಿಗೆ ಹೋಲ್ಡರ್ ಖಾತೆ ನೀಡಲು ಕ್ರಮ ಕೈಗೊಂಡಿದೆ.

ಹಾವೇರಿ ತಾಲ್ಲೂಕಿನ ಸಂಗೂರ್ ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ

454 (204) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾವೇರಿ ತಾಲ್ಲೂಕು ಸಂಗೂರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಎಂದು ಪ್ರಾರಂಭವಾಯಿತು (ಅದರ ಲಾಭ ಹಾಗೂ ನಷ್ಟದ ವಿವರ ನೀಡುವುದು);

ಆ) ಈ ಕಾರ್ಖಾನೆಯ ಹಾಲಿ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಯಾರು;

ಇ) ಈ ಕಾರ್ಖಾನೆಯನ್ನು ಬಲಪಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳು ಯಾವುವು? ಈ ಬಗ್ಗೆ ಎಷ್ಟು ಹಣ ಖರ್ಚು ಮಾಡಲಾಗಿದೆ;

ಈ) 1995-96ನೇ ಸಾಲಿನಲ್ಲಿ ಈ ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಕಬ್ಬು ಅರೆಯಲಾಯಿತು; ಎಷ್ಟು ಕಬ್ಬನ್ನು ಬೇರೆ ಯಾವ ಕಾರ್ಖಾನೆಗೆ ರವಾನಿಸಲಾಯಿತು.

ಉ) 1996-97ನೇ ಸಾಲಿನಲ್ಲಿ ಈ ಕಾರ್ಖಾನೆಯಲ್ಲಿ ಎಷ್ಟು ಕಬ್ಬು ಅರೆಯಲಾಗಿದೆ.

ಊ) ಕಬ್ಬು ಬೆಳೆಗಾರರಿಗೆ ಎಷ್ಟು ಬಾಕಿ ಹಣ ಪಾವತಿ ಮಾಡಬೇಕಾಗಿದೆ;

ಋ) ಈ ಕಾರ್ಖಾನೆಯಲ್ಲಿ ಕಬ್ಬು ಬೆಳೆಗಾರರಿಂದ ಯಾವ ನಿಯಮಾವಳಿಗಳ ಪ್ರಕಾರ ಕಬ್ಬು ಅರೆಯಲು ತೆಗೆದುಕೊಳ್ಳಲಾಗುವುದು;

ಶ್ರೀ ಉಮೇಶ್ ವಿ ಕತ್ತಿ (ಸಕ್ಕರೆ ಸಚಿವರು)

ಅ) 1983-84ರಲ್ಲಿ ಪ್ರಾರಂಭವಾಯಿತು. 31-3-96ಕ್ಕೆ 5,76,89,325 ರೂ. ಕ್ರೋಡಿಕೃತ ನಷ್ಟ ಅನುಭವಿಸಿದೆ. ಲಾಭಗಳಿಸಿರುವುದಿಲ್ಲ.

ಆ) ಶ್ರೀ ಸಿ.ಎಂ. ಉದಾಸಿ-ಅಧ್ಯಕ್ಷರು ಶ್ರೀ ಎಸ್.ವಿ. ಕರಿಯಣ್ಣನವರ-ವ್ಯವಸ್ಥಾಪಕ ನಿರ್ದೇಶಕರು.

ಇ) ಸರ್ಕಾರದಿಂದ ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ.

ಈ) ಒಟ್ಟು 2.47 ಲಕ್ಷ ಟನ್ ಕಬ್ಬನ್ನು ಅರೆಯಲಾಯಿತು. 16,000 ಮೆ. ಟನ್ ಕಬ್ಬನ್ನು ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ಹಿರಿಯೂರು ಮತ್ತು ಗಂಗಾವತಿ ಶುಗರ್ಸ್ ರಾಯಚೂರು ಇಲ್ಲಿಗೆ ರವಾನಿಸಲಾಯಿತು.

ಉ) 1996-97ನೇ ಸಾಲಿನಲ್ಲಿ ದಿನಾಂಕ 11-2-1997ರ ವರೆಗೆ ಒಟ್ಟು 1,45,326.371 ಮೆ:ಟನ್ ಕಬ್ಬನ್ನು ಅರೆಯಲಾಗಿದೆ.

ಊ) ರೂ. 350.00 ಲಕ್ಷ ಪಾವತಿಸಬೇಕಾಗಿದೆ.

ಋ) ಕಾರ್ಖಾನೆಯ ಉಪ ನಿಯಮ, ಕಬ್ಬು ನಿಯಂತ್ರಣ ಆದೇಶ 1966 ಹಾಗೂ ಆಡಳಿತ ಮಂಡಳಿಯು ನಿಯೋಜಿಸುವ ಕಾರ್ಯಕ್ರಮದಂತೆ ಕಬ್ಬನ್ನು ಅರೆಯಲು ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಅರೆಯುತ್ತಿರುವ ಕಬ್ಬಿನ ಪ್ರಮಾಣ

455 (205) ಶ್ರೀ ಮಂಜುನಾಥ ಸಿ ಕುನ್ನೂರ (ಶಿಗ್ಗಾಂವ್):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ:ಅವುಗಳ ಕಳೆದ ತೀರ್ಮಾನಗಳ ಲಾಭ ಮತ್ತು ನಷ್ಟ ತಿಳಿಸುವುದು;

ಆ) ರಾಜ್ಯದಲ್ಲಿ 1995-96ರಲ್ಲಿ ಎಷ್ಟು ಟನ್; ಕಬ್ಬನ್ನು ಬೆಳೆಯಲಾಯಿತು ಅದರಲ್ಲಿ ಎಷ್ಟು ಟನ್ ಕಬ್ಬನ್ನು ಕಾರ್ಖಾನೆಗಳ ಮೂಲಕ ಅರೆಯಲಾಯಿತು?

ಶ್ರೀ ಉಮೇಶ್ ಏ ಕತ್ತಿ (ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿರುತ್ತವೆ. ಇವುಗಳು 1994-95ರ ಸಾಲಿನಲ್ಲಿ ಗಳಿಸಿದ ಲಾಭ ಅನುಭವಿಸಿದ ನಷ್ಟ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ 1995-96ರಲ್ಲಿ ಸುಮಾರು 200 ಲಕ್ಷ ಟನ್ ಕಬ್ಬನ್ನು ಬೆಳೆಯಲಾಗಿದೆ. ಇದರಲ್ಲಿ ರಾಜ್ಯದಲ್ಲಿಯ ಸಕ್ಕರೆ ಕಾರ್ಖಾನೆಗಳು 128.58 ಲಕ್ಷ ಟನ್ ಕಬ್ಬನ್ನು ಅರೆದಿರುತ್ತವೆ.

ಸಕ್ಕರೆ ಕಾರ್ಖಾನೆಗಳು 1994-95ರ ಸಾಲಿನಲ್ಲಿ ಗಳಿಸಿದ ಲಾಭ:ಅನುಭವಿಸಿದ ನಷ್ಟದ ವಿವರಗಳು

(ಲಕ್ಷ ರೂ. ಗಳಲ್ಲಿ)

ಕ್ರ.ಸಂ.	ಕಾರ್ಖಾನೆ ಹೆಸರು	1994-95ರ ಸಾಲಿನಲ್ಲಿ	
		ಗಳಿಸಿದ ಲಾಭ	ಅನುಭವಿಸಿದ ನಷ್ಟ
1.	ಬೀದರ್ ಸ.ಸ.ಕಾ. (ನಿ)	-	1331.22
2.	ಭದ್ರಾ ಸ.ಸ. ಕಾ. (ನಿ)	27.65	-